# ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ, ನ್ಯಾಯಾಲಯ, ಹುಬ್ಬಳ್ಳಿ

**ಸಿಸಿ ನಂಃ 226 ಃ 2012**

ಪಿಡಬ್ಲೂ:8
ಸಿಡ್ಲೂ ಃ 18

ಸಾಕ್ಷಿಯ ಹೆಸರು ಃ ಹೊನ್ನಾಸಾ
ತಂದೆಯ ಹೆಸರು ಃ ರಾಮಚಂದ್ರಸಾ ನಿರಂಜನ
ವಯಸ್ಸು ಃ 70 ವರ್ಷ
ಉದ್ಯೋಗ ಃ ನಿವೃತ್ತ ಕಚೇರಿ ಅಧೀಕ್ಷಕರುಎಚ್‌ಡಿಎಮ್‌ಸಿ ಧಾರವಾಡ
ವಾಸ ಸ್ಥಳ ಃ ಹುಬ್ಬಳ್ಳಿ

ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಿದ ದಿನಾಂಕಃ 27–10–2016

ಮುಖ್ಯ ವಿಚಾರಣೆ ಎಪಿಪಿ ಯವರಿಂದಃ

ಈ ಪ್ರಕರಣದ 6ನೇ ಆರೋಪಿ ಗೊತ್ತು. ಸದರಿಯವರು ಅಕೌಂಟಂಟ್ ಅಂತಾ ಕರ್ತವ್ಯ ನಿರ್ವಹಿಸಿದ್ದು ಅವರ ನಂತರ ಸದರಿ ಹುದ್ದೆಗೆ ನಾನು ನೇಮನೂಕ ಆಗಿದ್ದೆ. ಈ ಪ್ರಕರಣದ ಅಪರಾಧಗಳ ಕುರಿತು ದಿನಪತ್ರಿಕೆಗಳಲ್ಲಿ 2000 ರದಾ ಅವಧಿಯಲ್ಲಿ ಓದಿ ತಿಳಿದುಕೊಂಡಿದ್ದೆ . ಅದರಂತೆ ಪಾಲಿಕೆಯಲ್ಲಿ ತುಂಡು ಕಾಮಗಾರಿ ಕುರಿತು ಕೆಲಸ ಆಗಿರುವುದಿಲ್ಲ ಆದರೆ ಬಿಲ್ ಪಾಸ್ ಆದ ಕುರಿತು ಕೇಳಿ ಗೊತ್ತಾಯಿತು. ಅದರಂತೆ ಸದರಿ ಬಿಲ್ಲುಗಳು ನೂಲ್ವಿ ಎಂಬ ಹೆಸರಿಗೆ ಪಾಸ್ ಆಗಿದ್ದ ಕುರಿತು ಗೊತ್ತಾಯಿತು. ಅವರು ಯಾರು ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ಆ ಸಂದರ್ಭದಲ್ಲಿ 1 ರಿಂದ 4ನೇ ಆರೋಪಿತರು ಅಭಿಯಂತರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಆರೋಪಿ 5 ರಿಂದ 7 ಇವರು ಅಕೌಂಟ್ ಸೆಕ್ಷೇನ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಸದರಿ ಪ್ರಕರಣದಲ್ಲಿ 22 ಲಕ್ಷ ಹಣ ಅಪರಾತಪರಾ ಆಗಿದ್ದರ ಬಗ್ಗೆ ಕೇಳಿ ಗೊತ್ತಾಯಿತು.

ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ

2. ನಾನು ಈ ಪ್ರಕರಣದ ಕುರಿತು ದಿನಪತ್ರಿಕೆಯಲ್ಲಿ ಪ್ರಕಟಿಸಿದ ವಿಷಯ ಮಾತ್ರ ಗೊತ್ತಿತ್ತು ವಿನಃ ಅದರ ಬಗ್ಗೆ ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇರಲಿಲ್ಲ ಎಂದರೆ ಸರಿ . ಸದರಿ ಸಾಕ್ಷ್ಯವನ್ನು ದಿನಪತ್ರಿಕೆಯಲ್ಲಿ ಪ್ರಕಟಿಸಿದ ಪ್ರಕಟಣೆಯ ಆಧಾರದ

ಮೇಲೆ ಹೇಳುತ್ತಿದ್ದೇನೆ ವಿನಃ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಅದರಂತೆ 4ನೇ ಆರೋಪಿ ಯಾವ ವಾರ್ಡಿನಲ್ಲಿ ಕೆಲಸ ಮಾಡುತ್ತಿದ್ದರು ಎಂಬ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿ .

ಮರು ವಿಚಾರಣೆಃ ಇಲ್ಲ

(ನನ್ನ ಹೇಳಿಕೆ ಪ್ರಕಾರ ಬೆರಳಚ್ಚುಗಾರರಿಂದ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರದಲ್ಲಿ ಮುದ್ರಿಸಲಾಯಿತು )

ಓ ಹೇ ಕೆ ಸರಿ ಇದೆ,

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ, ಹುಬ್ಬಳ್ಳಿ.